MANUVIKASA

# ಮನುವಿಕಾಸ

ಮನುವಿಕಾಸ ಸಂಸ್ಥೆಯಿಂದ ಪ್ರಕಟಿತ ವಾರ್ತಾ ಪತ್ರ ಖಾಸಗಿ ಪ್ರಚಾರಕ್ಕಾಗಿ ಮಾತ್ರ

ಸಂಪಾದಕರು : ಗಣಪತಿ ಭಟ್ಟ

EdelGive Foundation
An Edelweiss Initiative

ಸಂಪುಟ 7 ಸಂಚಿಕೆ 2

ಸಂಪಾದಕೀಯ ಮಂಡಳಿ : ಶುಭಾ ಪೈ, ಗಣಪತಿ ಹೆಗಡೆ, ಶ್ರೀಕಾಂತ ಹೆಗಡೆ




## ಸ್ವ-ಉದ್ಯೋಗಕ್ಕೆ ಮನುವಿಕಾಸದ ಪ್ರೋತ್ಸಾಹ ಕೌಶಲ್ಯ ತರಬೇತಿ ನಿತ್ಯ ನಿರಂತರ

ಭಾರತ ದೇಶವು ಜಗತ್ತಿನಲ್ಲಿ ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಒಂದು. ಅದರ ಜೊತೆ ಜೊತೆಯಲ್ಲಿ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ವಿಶ್ವದ ಎರಡನೇ ರಾಷ್ಟ್ರವೂ ಹೌದು. ನಿರುದ್ಯೋಗವು ನಮ್ಮ ದೇಶದ ಪ್ರಮುಖ ಸಮಸ್ಯೆಗಳಲ್ಲಿ ಒಂದಾಗಿದ್ದು, ವರ್ಷದಿಂದ ವರ್ಷಕ್ಕೆ ನಿರುದ್ಯೋಗಿಗಳ ಪ್ರಮಾಣ ಹೆಚ್ಚುತ್ತಲೇ ಇದೆ. ನಮ್ಮಲ್ಲಿನ ಯುವ ಜನತೆಯು ಉತ್ತಮ ಕೌಶಲ್ಯ ಹೊಂದಿದ್ದರೂ ಉದ್ಯೋಗ ದೊರೆಯುತ್ತಿಲ್ಲ. ಸರ್ಕಾರದಿಂದ ಎಲ್ಲಾ ಯುವಕರಿಗೂ ಉದ್ಯೋಗ ಕಲ್ಪಿಸಲು ಸಾಧ್ಯವಾಗುತ್ತಿಲ್ಲ.

ಕೌಶಲ್ಯವಿದ್ದು ಸ್ವ ಉದ್ಯೋಗ ಮಾಡಲು ಸಾಧ್ಯವಾಗದೆ ಇರುವ ಯುವಕ –ಯುವತಿಯರಿಗೆ ಮನುವಿಕಾಸ ಸಂಸ್ಥೆಯು ಸ್ವ ಉದ್ಯೋಗಕ್ಕೆ ಪ್ರೋತ್ಸಾಹಿಸಲು "ನಿರಂತರ ತರಬೇತಿ ಕೇಂದ್ರ" (Continuous Training Center) ಆರಂಭಿಸಿದೆ.

ಮನುವಿಕಾಸ ಸಂಸ್ಥೆಯು ಈಡೇಲ್‌ಗೀವ್ ಫೌಂಡೇಶನ್ ಸಹಯೋಗದಲ್ಲಿ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನ ಅಯೋಧ್ಯಾ ಕಾಲೋನಿಯಲ್ಲಿ ನಿರಂತರ ತರಬೇತಿ ಕೇಂದ್ರವನ್ನು ಆರಂಭಿಸಿದ್ದು, ತರಬೇತಿಯ ಒಂದು ಭಾಗವಾದ ಸುಧಾರಿತ ಹೊಲಿಗೆ ತರಬೇತಿ ಕಾರ್ಯಕ್ರಮಕ್ಕೆ ಸಪ್ಟೆಂಬರ್ 1, ರವಿವಾರದಂದು ಚಾಲನೆ ದೊರೆಯಿತು.

ಅತಿಥಿಗಳಾಗಿ ಆಗಮಿಸಿದ ನಿರ್ದೇಶಕ ಮಂಡಳಿ ಸದಸ್ಯರಾದ ಕೆಂಪರಾಜುರವರು ಮಾತನಾಡಿ, ಮನುಷ್ಯನಿಗೆ ಕಲಿಕೆ ಎನ್ನುವುದು ನಿರಂತರವಾದದ್ದು ಹೊಸ ರೀತಿಯ ಕಲಿಕೆ ಅವನನ್ನು ಕ್ರಿಯಾಶೀಲವಾಗಿ ಯೋಚಿಸುವಂತೆ ಮಾಡುವುದಲ್ಲದೆ ಅದರಿಂದ ಆತನ ಆರ್ಥಿಕ ಅಭಿವೃದ್ಧಿಯೂ ಸಹ ಸಾಧ್ಯವಾಗುತ್ತದೆ. ಈ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆಯ ಪ್ರಯತ್ನ ಅತ್ಯಂತ ಸೂಕ್ತವಾಗಿದೆ. ಸುಧಾರಿತ ಹೊಲಿಗೆ ತರಬೇತಿಯನ್ನು ಆಯೋಜಿಸಿ ಗ್ರಾಮೀಣ ಭಾಗದ ಉತ್ಸಾಹಿಗಳಿಗೆ ಪರ್ಯಾಯ ಜೀವನೋಪಾಯ ನಿರ್ವಹಣೆ ಜೊತೆಗೆ ಕೌಶಲ್ಯಾಭಿವೃದ್ಧಿಯನ್ನು ಸಂಸ್ಥೆ ಒದಗಿಸುತ್ತಿರುವುದು ಸಂತಸ ಎಂದರು.

ಅತಿಥಿಗಳಾಗಿ ಆಗಮಿಸಿದ ಸಂಸ್ಥೆಯ ಇನ್ನೋರ್ವ ನಿರ್ದೇಶಕರಾದ ಶ್ರೀ ವಿವೇಕ ಹೆಗಡೆ ಮಾತನಾಡಿ ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಪೈಪೋಟಿಗೆ ತಕ್ಕಂತೆ ಹೊಸ ರೀತಿಯ ಕೌಶಲ್ಯಗಳನ್ನು ಅಳವಡಿಸಿಕೊಂಡು ಮುನ್ನಡೆಯುವುದು ಅನಿವಾರ್ಯವಾಗಿದೆ. ಬೇಡಿಕೆಗೆ ತಕ್ಕಂತೆ ಪೂರೈಕೆ ಮತ್ತು ಗ್ರಾಹಕನ ಅಗತ್ಯತೆಗಳನ್ನು ಅರಿತು ಅದಕ್ಕೆ ಅನುಗುಣವಾಗಿ ಉತ್ತಮ ಗುಣಮಟ್ಟದ ಸರಕುಗಳನ್ನು ಪೂರೈಸಿದಾಗ ಮಾತ್ರ ನಿರ್ದಿಷ್ಟ ಗುರಿಯನ್ನು ತಲುಪಲು ಸಾಧ್ಯ ಎಂದರು.

ನಿರಂತರ ತರಬೇತಿ ಕೇಂದ್ರದಲ್ಲಿ ಅಡ್ವಾನ್ಸ್ಡ್ ಫ್ಯಾಶನ್ ಡಿಸೈನಿಂಗ್, ಅಕೌಂಟ್ಸ್ ಮತ್ತು ಆಫೀಸ್ ಮೇನ್‌ಟೇನೆನ್ಸ್, ಫೋಟೋಗ್ರಾಫಿ–ವೀಡಿಯೋಗ್ರಾಫಿ–ವೀಡಿಯೋ ಎಡಿಟಿಂಗ್, ಶಾಪ್ ಕೀಪಿಂಗ್, ಪ್ಲಂಬಿಂಗ್ ಮತ್ತು ಎಲೆಕ್ಟ್ರಿಶಿಯನ್ ತರಬೇತಿಯನ್ನು ನೀಡಲಾಗುತ್ತದೆ. ಅಡ್ವಾನ್ಸ್ಡ್ ಫ್ಯಾಶನ್ ಡಿಸೈನಿಂಗ್, ಅಕೌಂಟ್ಸ್ ಮತ್ತು ಆಫೀಸ್ ಮೇನ್‌ಟೇನೆನ್ಸ್ ತರಬೇತಿಗಳು 60 ದಿನಗಳ ತರಬೇತಿಗಳಾಗಿವೆ. ಉಳಿದ ತರಬೇತಿಗಳು 1 ತಿಂಗಳ ತರಬೇತಿಗಳಾಗಿದ್ದು, ಉತ್ತರ ಕನ್ನಡ, ಹಾವೇರಿ ಹಾಗೂ ಧಾರವಾಡ ಜಿಲ್ಲೆಯ ಆಯ್ದ ತಾಲೂಕುಗಳಲ್ಲಿನ 22 ರಿಂದ 35 ವರ್ಷದೊಳಗಿನ 500 ಜನ ಶಿಬಿರಾರ್ಥಿಗಳಿಗೆ ತರಬೇತಿ ನಡೆಸಲಾಗುವುದು ಎಂದು ಸಂಸ್ಥೆಯು ತಿಳಿಸಿದೆ.

ಮನುವಿಕಾಸ ಸಂಸ್ಥೆಯು ಈಗಾಗಲೇ ಉತ್ತರ ಕನ್ನಡ ಹಾಗೂ ಧಾರವಾಡ ಜಿಲ್ಲೆಯ ಆಯ್ದ ತಾಲೂಕುಗಳಲ್ಲಿ ಸ್ವಾವಲಂಬನೆ ಬದುಕು ಕಟ್ಟಿಕೊಳ್ಳಲು ಮಹಿಳೆಯರಿಗೆ ಹೊಲಿಗೆ ತರಬೇತಿ, ಬ್ಯೂಟಿಶಿಯನ್ ತರಬೇತಿ, ಅಡುಗೆ ತರಬೇತಿ ಮತ್ತು ಹೈನುಗಾರಿಕಾ ತರಬೇತಿಯನ್ನು ನೀಡಿ ಸ್ವ ಉದ್ಯೋಗಕ್ಕೆ ಪ್ರೋತ್ಸಾಹಿಸುತ್ತಾ ಬಂದಿದೆ.

# ಸಂಪಾದಕೀಯ



ಆತ್ಮೀಯ ಓದುಗರೇ......

ಪ್ರಸಕ್ತ ವರ್ಷದಲ್ಲಿ ಹಿಂದೆಂದೂ ಕಂಡು ಕೇಳಿರದ ರೂಪದಲ್ಲಿ ಅತಿವೃಷ್ಟಿ ಉಂಟಾಗಿತ್ತು. ಮನೆ ತೋಟದಂಚಿನ ಹಳ್ಳ ಕೊಳ್ಳಗಳು ಕೆಂಪು ಬಣ್ಣಕ್ಕೆ ತಿರುಗಿ ಉಗ್ರ ರೂಪ ತಾಳಿದ್ದವು. ಇಂದೋ ನಾಳೆಯೋ ಮಳೆ ಸ್ವಲ್ಪ ಕಡಿಮೆ ಆಗಬಹುದು ಎಂಬ ಲೆಕ್ಕಾಚಾರ ಮಲೆನಾಡು ಹಾಗೂ ಕರಾವಳಿಗರದ್ದಾಗಿತ್ತು. ಆದರೆ ವರುಣನ ಲೆಕ್ಕಣಿಕೆಯೇ ಬೇರೆ ಇತ್ತು, ಮಲೆನಾಡು ಹಾಗೂ ಕರಾವಳಿ ಭಾಗದಲ್ಲಿ ಮಳೆಯ ಆರ್ಭಟಕ್ಕೆ ನದಿ ಪಾತ್ರದ ಅಂಚಿನಲ್ಲಿ ಬಹಳಷ್ಟು ಕಡೆ ಪ್ರವಾಹದ ಪರಿಸ್ಥಿತಿ ಉಂಟಾಗಿತ್ತು. ಮಳೆಯಿಂದ ಹಲವು ಕಡೆಗಳಲ್ಲಿ ಗುಡ್ಡ ಕುಸಿತ ಉಂಟಾದರೆ, ಇನ್ನು ಕೆಲವು ಕಡೆ ಮನೆಗಳ ಮೇಲೆ ಮರಗಳು ಬಿದ್ದು ಅನೇಕರು ತಮ್ಮ ಸೂರನ್ನೂ ಕಳೆದುಕೊಂಡಿದ್ದರು, ಜಮೀನುಗಳಿಗೆ ನೀರು ನುಗ್ಗಿ ಕೃಷಿ ಬದುಕು ಮಳೆಯಲ್ಲಿ ತೊಯ್ದು ತೊಪ್ಪೆಯಾಗಿತ್ತು.

ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ ಹಾಗೂ ಉಡುಪಿ ಜಿಲ್ಲೆಯ ಕುಂದಾಪುರ ತಾಲೂಕಿನಲ್ಲಿ ನೆರೆ ಪ್ರವಾಹದ ಸಂದರ್ಭದಲ್ಲಿ ತೊಂದರೆಗೀಡಾದ ಕುಟುಂಬವನ್ನು ಗುರುತಿಸಿ ಅವರಿಗೆ ಶೆಲ್ಟರ್ ಕಿಟ್(ಅಗತ್ಯ ಪರಿಕರಗಳನ್ನು) ವಿತರಿಸುವಂತಹ ಕಾರ್ಯವನ್ನು ಮಾಡಿದೆ. ಸರಿಸುಮಾರು ಒಂದುವರೆ ಸಾವಿರಕ್ಕೂ ಅಧಿಕ ಕುಟುಂಬಗಳಿಗೆ ಸಹಾಯ ಹಸ್ತವನ್ನು ಚಾಚಿದೆ. ಕಳೆದ ವರ್ಷದ ಮಳೆಗಾಲದಲ್ಲೂ ಕೂಡ ಪ್ರವಾಹದಿಂದ ಹಾನಿಗೀಡಾದಂತಹ ಕುಟುಂಬಕ್ಕೆ ನೆರವನ್ನು ನೀಡಿ ಸಂತ್ರಸ್ತರ ಕಣ್ಣೀರು ಒರೆಸುವ ಕಾರ್ಯವನ್ನು ಸಂಸ್ಥೆಯು ಮಾಡಿದೆ. ಮನುವಿಕಾಸ ಸಂಸ್ಥೆಯ ಈ ಕಾರ್ಯಕ್ಕೆ ಆರ್ಥಿಕ ಸಹಕಾರವನ್ನು ಒದಗಿಸಿದಂತಹ ಅಮೆಜಾನ್ ಸಂಸ್ಥೆ ಮತ್ತು ಡೊನೇಟ್ ಕಾರ್ಡ್ ಇಂಡಿಯಾ, ಆಶ್ರಯ ಹಸ್ತ ಟ್ರಸ್ಟ್ ಬೆಂಗಳೂರು, ಹಾಗೂ ಅಜೀಂ ಪ್ರೇಮ್‌ಜಿ ಫೌಂಡೇಶನ್ ಅವರಿಗೆ ಈ ಮೂಲಕ ನಾನು ಧನ್ಯವಾದವನ್ನು ಅರ್ಪಿಸುತ್ತೇನೆ.

ದಿನದಿಂದ ದಿನಕ್ಕೆ ಎಲ್ಲಾ ಕಡೆಗಳಲ್ಲೂ ನಿರುದ್ಯೋಗ ಸಮಸ್ಯೆ ಎದುರಾಗುತ್ತಿದೆ. ಹಳ್ಳಿಗಳು ಬರಿದಾಗಿ ಸಾಕಷ್ಟು ಯುವಕ ಯುವತಿಯರು ಉದ್ಯೋಗಕ್ಕಾಗಿ ದೊಡ್ಡ ದೊಡ್ಡ ಮಹಾನಗರಗಳನ್ನು ಅರಸುತ್ತ ತೆರಳುತ್ತಿದ್ದಾರೆ. ಅವರಿಗೆ ಸ್ವ ಉದ್ಯೋಗವನ್ನು ಕಲ್ಪಿಸುವ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆಯು ನಿರಂತರ ತರಬೇತಿ ಕೇಂದ್ರವನ್ನ ಆರಂಭಿಸಿದೆ. ಈ ಕೇಂದ್ರದಲ್ಲಿ ಶಾಪ್ ಕೀಪಿಂಗ್, ಕಚೇರಿ ನಿರ್ವಹಣೆ, ಫ್ಯಾಶನ್ ಡಿಸೈನಿಂಗ್, ಹೊಲಿಗೆ ತರಬೇತಿ, ಫೋಟೋ ಮತ್ತು ವಿಡಿಯೋ ಎಡಿಟಿಂಗ್ ಇತ್ಯಾದಿ ತರಬೇತಿಗಳನ್ನು ಕಲಿಸಿಕೊಡಲಾಗುತ್ತಿದೆ. ಇದರಿಂದಾಗಿ ನೂರಾರು ಜನರಿಗೆ ಸ್ವ ಉದ್ಯೋಗದ ಮೂಲಕ ಬದುಕು ಕಟ್ಟಿಕೊಳ್ಳಲು ನೆರವಾಗುತ್ತಿದೆ. ಈ ನಿಟ್ಟಿನಲ್ಲಿ ಸಂಸ್ಥೆಯ ಬಹುದಿನಗಳ ಕನಸಾಗಿದ್ದ ನಿರಂತರ ಕಲಿಕಾ ಕೇಂದ್ರ ಎಂಬ ಹೆಸರಿನಲ್ಲಿ ಕೌಶಲ್ಯ ತರಬೇತಿಯನ್ನು ಶಿರಸಿಯಲ್ಲಿ ಆರಂಭಿಸಲಾಗಿದ್ದು, ಹಾವೇರಿ, ಧಾರವಾಡ, ಶಿವಮೊಗ್ಗ ಜಿಲ್ಲೆಗಳ ಆಯ್ದ ತಾಲೂಕುಗಳಿಗೆ ತರಬೇತಿಯನ್ನು ವಿಸ್ತರಿಸುವ ಹಂಬಲವಿದೆ.

ಕಳೆದ 5-6 ವರ್ಷಗಳಿಂದ ಮಹಿಳಾ ಸಬಲೀಕರಣಕ್ಕಾಗಿ ಈಡೇಲ್‌ಗೀವ್ ಫೌಂಡೇಶನ್ ಸಹಯೋಗದಲ್ಲಿ ಯೋಜನೆಯನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದು, ಅದರ ಮುಂದುವರಿದ ಭಾಗವಾಗಿ ಈಗಿನ ಪ್ರಸ್ತುತ ವರ್ಷದಲ್ಲಿ ಮಹಿಳೆಯರಿಗೆ ಭತ್ತದ ಬೆಳೆಯಲ್ಲಿ ಶ್ರೀ ಪದ್ಧತಿ, ಬೀಜ ಸಂಗ್ರಹಣ ಬ್ಯಾಂಕ್ ಈ ಮೊದಲಾದ ವಿಷಯಗಳ ಕುರಿತಾಗಿ ತರಬೇತಿಯನ್ನು ಆಯೋಜಿಸಿ ಜಾಗೃತಿ ಮೂಡಿಸಲಾಗುತ್ತಿದೆ.

ನಬಾರ್ಡ್ ಸಂಸ್ಥೆಯ ಸಹಕಾರದೊಂದಿಗೆ ಅಂಕೋಲಾ ತಾಲೂಕಿನ ಡೊಂಗ್ರಿ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿನ 150 ಸಿದ್ದಿ ಕುಟುಂಬಗಳನ್ನು ಆರ್ಥಿಕವಾಗಿ ಅಭಿವೃದ್ಧಿಪಡಿಸಲು ವಿವಿಧ ಕಾರ್ಯಯೋಜನೆಗಳನ್ನ ರೂಪಿಸಿ ಅನುಷ್ಠಾನಗೊಳಿಸಲಾಗುತ್ತಿದೆ. ಆ ಕುರಿತಾದಂತಹ ಮಾಹಿತಿಯು ಹೊತ್ತಿಗೆಯಲ್ಲಿ ಅಡಕವಾಗಿದೆ.

ಈಗಾಗಲೇ ಮನುವಿಕಾಸ ಸಂಸ್ಥೆಯು ವಿವಿಧ ದಾನಿ ಸಂಸ್ಥೆಗಳ ಸಹಕಾರದಲ್ಲಿ 281 ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದೆ. ಮುಂದಿನ ದಿನಮಾನಗಳಲ್ಲಿ ಚಿತ್ರದುರ್ಗ, ದಾವಣಗೆರೆ, ಬೆಳಗಾವಿ ಜಿಲ್ಲೆಯ ಆಯ್ದ ತಾಲೂಕುಗಳಲ್ಲಿ ಕೆರೆ ಪುನರುಜ್ಜೀವನ ಕಾರ್ಯಕ್ರಮವನ್ನು ವಿಸ್ತರಿಸುವಂತಹ ಆಶಯ ನಮ್ಮದಾಗಿದೆ. 3500 ಕ್ಕೂ ಅಧಿಕ ಕೃಷಿ ಹೊಂಡಗಳನ್ನು ನಿರ್ಮಿಸಿ ರೈತರಿಗೆ ಕೃಷಿ ಬದುಕಿಗೆ ನೆರವಾಗಲು ಸಹಕಾರಿಯಾಗಿದ್ದೇವೆ. ಮುಂದಿನ 10 ವರ್ಷದಲ್ಲಿ 1000 ಕೆರೆಗಳನ್ನು ಪುನರುಜ್ಜೀವನಗೊಳಿಸುವ ಹಾಗೂ 10,000 ಕೃಷಿ ಹೊಂಡವನ್ನು ನಿರ್ಮಾಣ ಮಾಡುವ ಕನಸು ಮನುವಿಕಾಸ ಸಂಸ್ಥೆಯದ್ದಾಗಿದೆ.

ಕಳೆದ 5-6 ವರ್ಷಗಳಿಂದ ನಿರಂತರವಾಗಿ ಈ ತ್ರೈ ಮಾಸಿಕ ವಾರ್ತಾ ಪತ್ರವನ್ನ ತಮ್ಮ ಬಳಿಗೆ ತಲುಪಿಸಲು ಸಂಸ್ಥೆಯು ಅವಿರತವಾಗಿ ಶ್ರಮಿಸಿದೆ. ನಿರ್ದೇಶಕ ಮಂಡಳಿಯ ಸೂಕ್ತ ಮಾರ್ಗದರ್ಶನದ ಅಡಿಯಲ್ಲಿ ಸಂಚಿಕೆ ಹೊಸ ನಾವಿನ್ಯತೆಯೊಂದಿಗೆ ಮುದ್ರಣಗೊಳ್ಳುತ್ತಿದೆ. ಮುಂಬರುವ ದಿನಗಳಲ್ಲಿಯೂಸಹ ತಮ್ಮ ಸೂಕ್ತ ಸಹಕಾರ ಹಾಗೂ ಮಾರ್ಗದರ್ಶನದ ನಿರೀಕ್ಷೆಯಲ್ಲಿ ಈ ಸಂಚಿಕೆಯನ್ನು ತಮ್ಮ ಕೈಗಿಡುತ್ತಿದ್ದೇವೆ.

ವಂದನೆಗಳೊಂದಿಗೆ,

**ಗಣಪತಿ ಭಟ್ಟ**
ನಿರ್ದೇಶಕರು
ಮನುವಿಕಾಸ ಸಂಸ್ಥೆ, ಶಿರಸಿ

# ಮನುವಿಕಾಸ ಸಂಸ್ಥೆಯಿಂದ ನೆರೆ ಸಂತ್ರಸ್ತರಿಗೆ ಅಗತ್ಯ ಶೇಲ್ಟರ್ ಕಿಟ್‌ಗಳ ವಿತರಣೆ



ಅಂಕೋಲಾ

ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ನೆರೆಹಾವಳಿಯಿಂದ ಹಾನಿಗೊಳಗಾದ ಹೊನ್ನಾವರ ತಾಲೂಕಿನ ಕಡತೋಕಾ ಗ್ರಾಮ ಪಂಚಾಯತಿ ವ್ಯಾಪ್ತಿಯ, ಕೆಕ್ಕಾರ, ಲಕ್ಕುಮನೆಕೇರಿ, ಹೂಜಿಮುರಿ, ಹೆಬ್ಬಳೆಕೊಪ್ಪ, ಹೆಬ್ಬಳೆಕೇರಿ, ಕಡತೋಕ, ಗಡ್ಡಿನಕಟ್ಟು ನವಿಲಗೋಣ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಾಡಗೇರಿ, ನವಿಲಗೋಣ, ಅಂಕೋಲಾ ತಾಲೂಕಿನ ಶಿರೂರು ಮತ್ತು ಸಡಗೇರಿ ಗ್ರಾಮ ಪಂಚಾಯತದ ಆಯ್ದ ಗ್ರಾಮಗಳಲ್ಲಿ ನೆರೆ ಪ್ರವಾಹದಲ್ಲಿ ಮನೆ ಹಾನಿಗೊಳಗಾದ ಸಂತ್ರಸ್ತರಿಗೆ  ಕಿಟ್‌ಗಳನ್ನು ವಿತರಿಸಿತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಹಾಗೂ ನಮಸ್ಕಾರ ಸಮಾಜ ಸೇವಾ ಸಂಸ್ಥೆಯ ಅಧ್ಯಕ್ಷರಾದ ಶ್ರೀ ರಮೇಶ್ ನಾಯ್ಕ ಭಾಗವಹಿಸಿದ್ದರು. ಸಾಮಾಜಿಕ ಕಾರ್ಯಕರ್ತರಾದ ಶ್ರೀ ಸೂರಜ್ ನಾಯ್ಕ ಸೋನಿ, ಕಡತೋಕ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಸಾವಿತ್ರಿ ಭಟ್ಟ, ನವಿಲಗೋಣ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ಮಾದೇವಿ ನಾಯ್ಕ  ಹಾಗೂ ಕಡತೋಕ ಗ್ರಾಮ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಬಾಲಕೃಷ್ಣ ನಾಯ್ಕ, ರೋಟರಿ ಅಧ್ಯಕ್ಷರಾದ ಅತುಲ್ ಕಾಮತ ಅವರು ಹಾಜರಿದ್ದರು.

ಮಳೆಗಾಲದಲ್ಲಿ ಅತಿ ಹೆಚ್ಚು ಗುಡ್ಡ ಕುಸಿತವಾಗಿ ಹಾನಿಯಾದಂತಹ ಪ್ರದೇಶಗಳಿಗೆ ಮನುವಿಕಾಸ ಸಂಸ್ಥೆಯು ಭೇಟಿ ನೀಡಿ ಅಗತ್ಯ ವಸ್ತುಗಳ ಕಿಟ್‌ಗಳನ್ನು ವಿತರಣೆ ಮಾಡಿದೆ.

ಕುಮಟಾ

ಉತ್ತರಕನ್ನಡ ಜಿಲ್ಲೆಯಲ್ಲಿ ಆಶ್ರಯ ಹಸ್ತ ಟ್ರಸ್ಟ್ ಬೆಂಗಳೂರು ಇವರ ಆರ್ಥಿಕ ಸಹಾಯದಲ್ಲಿ ಮನುವಿಕಾಸ ಸಂಸ್ಥೆಯು 480 ನೆರೆ ಸಂತ್ರಸ್ತ ಕುಟುಂಬಗಳಿಗೆ ಶೆಲ್ಟರ್ ಕಿಟ್ ವಿತರಿಸುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದ್ದು, ದಿನಾಂಕ 13 ಅಗಸ್ಟ್ 2024 ಮಂಗಳವಾರದಂದು ಕುಮಟಾ ತಾಲೂಕಿನ ಹೆಗಡೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅತಿವೃಷ್ಟಿಯಿಂದಾಗಿ ಮನೆಹಾನಿಗೊಳಗಾದ ಸಂತ್ರಸ್ತರಿಗೆ ಶೆಲ್ಟರ್ ಕಿಟ್ ವಿತರಿಸುವ  ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಮಾತನಾಡಿ, ಸಂಸ್ಥೆಯು ಕೆಲವು ವರ್ಷಗಳಿಂದ ನೆರೆ ಸಂತ್ರಸ್ತರಿಗೆ ಸಹಾಯ ಒದಗಿಸುತ್ತಿದೆ. ನೆರೆಯಿಂದ ಹಾನಿಗೊಳಗಾದವರು ಶೀಘ್ರವಾಗಿ ಚೇತರಿಸಿಕೊಳ್ಳಲು ಅಗತ್ಯವಾದ ನೆರವನ್ನು ಮನುವಿಕಾಸ ಸಂಸ್ಥೆಯು ನೀಡುತ್ತಿದೆ ಎಂದರು.

ಕುಮಟಾ ರೋಟರಿ ಕ್ಲಬ್‌ನ ಅಧ್ಯಕ್ಷರಾದ ರೋ. ಅತುಲ್ ಕಾಮತ್ ಸದಸ್ಯರಾದ ರೋ. ಜೈ ವಿಠಲ್‌ಕುಬಾಲ್, ರೋ. ಚೇತನ್ ಶೇಟ್, ತಾಲೂಕಾ ಪಂಚಾಯತದ ಕಾರ್ಯನಿರ್ವಾಹಕ ಅಧಿಕಾರಿಗಳಾದ ಆರ್. ಎಲ್. ಭಟ್ಟ, ಪಂಚಾಯತಿಯ ಅಧ್ಯಕ್ಷರಾದ ಮಂಜುನಾಥ ಪಟಗಾರ, ಉಪಾಧ್ಯಕ್ಷರಾದ ಶ್ರೀಮತಿ ಆಶಾ ನಾಯ್ಕ್, ಸದಸ್ಯರಾದ ಬಿ. ಜಿ. ಶ್ಯಾನಬಾಗ್ ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ವಿ.ಎ. ಪಟಗಾರ, ಗ್ರಾಮ ಆಡಳಿತ ಅಧಿಕಾರಿಗಳಾದ ವಿನೋದರಾವ್, ವಕೀಲರು ಹಾಗೂ ಸಾಮಾಜಿಕ ಕಾರ್ಯಕರ್ತರಾದ ವಿನಾಯಕ ಪಟಗಾರ ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.







ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಆಶ್ರಯ ಹಸ್ತ ಟ್ರಸ್ಟ್ ಬೆಂಗಳೂರು ಇವರ ಸಹಯೋಗದೊಂದಿಗೆ ಸಿದ್ದಾಪುರದ ಬಾಲಭವನದಲ್ಲಿ 17/8/2024 ಶನಿವಾರದಂದು ಸಿದ್ದಾಪುರ ತಾಲೂಕಿನಲ್ಲಿ ನೆರೆಹಾವಳಿಯಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಿಸುವ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ ಪ್ರಾಸ್ತಾವಿಕವಾಗಿ ಮಾತನಾಡಿ, ಇತ್ತೀಚೆಗೆ ಹವಾಮಾನ ಬದಲಾವಣೆಯಿಂದಾಗಿ ಪ್ರಕೃತಿ ವಿಕೋಪಗಳು ಸಂಭವಿಸುತ್ತಿವೆ. ಅದನ್ನು ಎದುರಿಸುವ ಮತ್ತು ವಿಕೋಪಗಳು ಉಂಟಾಗದಂತೆ ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸುವುದು ಅನಿವಾರ್ಯವಾಗಿದೆ. ಈಗಾಗಲೇ ಮನುವಿಕಾಸ ಸಂಸ್ಥೆ ಹಲವು ದಾನಿ ಸಂಸ್ಥೆಗಳ ಜೊತೆಗೂಡಿ ಉತ್ತರ ಕನ್ನಡ ಜಿಲ್ಲೆಯಾದ್ಯಂತ 1500ಕ್ಕೂ ಹೆಚ್ಚು ನೆರೆಹಾವಳಿಯಿಂದ ಹಾನಿಗೊಳಗಾದ ಸಂತ್ರಸ್ತ ಕುಟುಂಬಗಳಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಿಸುವ ಕಾರ್ಯಯೋಜನೆಯಲ್ಲಿ ತೊಡಗಿಕೊಂಡಿದೆ. ಇದಕ್ಕೆ ಲಯನ್ಸ್ ಮತ್ತು ರೋಟರಿ ಸಂಸ್ಥೆಗಳು ಕೂಡ ಅಗತ್ಯ ಸಹಕಾರವನ್ನು ನೀಡಿವೆ ಎಂದರು.

ಸಿದ್ದಾಪುರ ತಾಲೂಕಿನ ಲಯನ್ಸ್ ಕ್ಲಬ್‌ನ ಅಧ್ಯಕ್ಷರಾದ ಶ್ರೀ ಎ.ಜಿ ನಾಯ್ಕ್ ಮಾತನಾಡಿ, ಪ್ರಕೃತಿ ವಿಕೋಪಗಳು ಮಲೆನಾಡಿನ ನಮ್ಮ ಭಾಗದಲ್ಲಿ ಸಂಭವಿಸಿದಾಗ ಅದಕ್ಕೆ ತ್ವರಿತ ಹಾಗೂ ಸಮಯೋಚಿತ ನೆರವು ಒದಗಿಸುವುದರಲ್ಲಿ ಮನುವಿಕಾಸದಂತಹ ಸ್ವಯಂ ಸೇವಾ ಸಂಸ್ಥೆಗಳು ಕಾರ್ಯೋನ್ಮುಖವಾಗಿವೆ. ಇದಕ್ಕೆ ಲಯನ್ಸ್ ಕ್ಲಬ್ ಸಹ ಕೈ ಜೋಡಿಸಿದ್ದು ನೆರೆಹಾವಳಿಯಿಂದ ತಮ್ಮ ದೈನಂದಿನ ಬದುಕನ್ನು ಕಳೆದುಕೊಂಡ ಕುಟುಂಬಗಳಿಗೆ ಸಂಸ್ಥೆ ನೆರವು ನೀಡುತ್ತಿದೆ ಎಂದು ಹೇಳಿದರು.

ಲಯನ್ಸ್ ಕ್ಲಬ್‌ನ ಮಾಜಿ ಗವರ್ನರ್ ಶ್ರೀ ರವಿ ಹೆಗಡೆ ಹೂವಿನಮನೆ ಮಾತನಾಡಿ, ಮನುವಿಕಾಸದಂತಹ ಸಂಸ್ಥೆಗಳು ಸ್ಥಳೀಯ ಮಟ್ಟದಲ್ಲಿ ನೆರೆಹಾವಳಿಯಿಂದ ಉಂಟಾದ ಕುಟುಂಬಗಳಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಿಸುತ್ತಿರುವುದು ಅತ್ಯಂತ ಸಮಯೋಚಿತವು ಹಾಗೂ ಜವಾಬ್ದಾರಿಯುತ ಕೆಲಸವಾಗಿದೆ. ಶೆಲ್ಟರ್ ಕಿಟ್‌ಗಳನ್ನು ಪಡೆದ ಫಲಾನುಭವಿಗಳು ಅದನ್ನು ಸರಿಯಾದ ರೀತಿಯಲ್ಲಿ ಉಪಯೋಗ ಮಾಡಿಕೊಂಡರೆ ಸಂಸ್ಥೆಯು ಪಟ್ಟ ಶ್ರಮಕ್ಕೆ ತಕ್ಕ ಪ್ರತಿಫಲ ಸಿಕ್ಕಂತಾಗುತ್ತದೆ ಎಂದು ಹೇಳಿದರು.

ಸಮಾಜಕ್ಕೆ ಉಂಟಾಗಿರುವ ಸಮಸ್ಯೆಗಳನ್ನು ಮನಗಂಡು ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಮನುವಿಕಾಸ ಸಂಸ್ಥೆಯು ಮಾಡುತ್ತಿರುವ ಕೆಲಸ ಅತ್ಯಂತ ಅಭಿನಂದನೀಯವಾಗಿದೆ ಎಂದು ಸಿದ್ದಾಪುರ ತಾಲೂಕಿನ ಆರಕ್ಷಕ ಇಲಾಖೆಯ ಎ.ಎಸ್.ಐ. ಶ್ರೀ ರಮೇಶ್ ಗೌಡ ಅಭಿಪ್ರಾಯ ವ್ಯಕ್ತಪಡಿಸಿದರು.

ಇದೇ ಸಂದರ್ಭದಲ್ಲಿ ನೆರೆಯಿಂದ ಹಾನಿಗೊಳಗಾದ 60 ಕುಟುಂಬಗಳಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಕಾರ್ಯಕ್ರಮದಲ್ಲಿ ಲಯನ್ಸ್ ಕ್ಲಬ್‌ನ ಸೆಕ್ರೆಟರಿ ಆದ ಶ್ರೀ ಕುಮಾರ್ ಗೌಡ, ಖಜಾಂಚಿ ಶ್ರೀ ಆಕಾಶ ಹೆಗಡೆ, ಸದಸ್ಯರಾದ ಶ್ರೀ ನಾಗರಾಜ್ ಪಾಟೀಲ್, ಶ್ರೀ ಅನಿಲ್ ದೇವನಹಳ್ಳಿ, ಸಾಮಾಜಿಕ ಕಾರ್ಯಕರ್ತರಾದ ಶ್ರೀ ವಿಶ್ವನಾಥ್ ಗೌಡ ಹಾಗೂ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.






## ಶಿರಸಿ





ಮನುವಿಕಾಸ ಸಂಸ್ಥೆಯಿಂದ ಉತ್ತರ ಕನ್ನಡ ಜಿಲ್ಲೆಯ ಶಿರಸಿ ತಾಲೂಕಿನಲ್ಲಿ ಅತಿಯಾದ ಮಳೆಯಿಂದಾಗಿ ಮನೆಯನ್ನು ಸಂಪೂರ್ಣ ಅಥವಾ ಭಾಗಶಃ ಕಳೆದುಕೊಂಡ ಕುಟುಂಬಗಳಿಗೆ ಶೆಲ್ಟರ್ ಕಿಟ್ ವಿತರಣಾ ಕಾರ್ಯಕ್ರಮವನ್ನು 24/08/2024 ಶನಿವಾರದಂದು ನಗರದ ಪತ್ರಕರ್ತರ ಭವನದಲ್ಲಿ ಆಯೋಜಿಸಲಾಗಿತ್ತು. ಕಾರ್ಯಕ್ರಮದಲ್ಲಿ ಮನುವಿಕಾಸ ಸಂಸ್ಥೆ ನಿರ್ದೇಶಕರಾದ ಶ್ರೀ ಗಣಪತಿ ಭಟ್ಟ ಪ್ರಾಸ್ತಾವಿಕವಾಗಿ ಮಾತನಾಡಿ, ವಿವಿಧ ದಾನಿ ಸಂಸ್ಥೆಗಳ ನೆರವಿನಿಂದ ಸ್ಥಳೀಯ ಸಂಘ ಸಂಸ್ಥೆಗಳ ಹಾಗೂ ಇಲಾಖೆಗಳ ಸಹಯೋಗದೊಂದಿಗೆ ನೆರೆ ಸಂತ್ರಸ್ತರಿಗೆ ಉತ್ತರ ಕನ್ನಡ ಮತ್ತು ಉಡುಪಿ ಜಿಲ್ಲೆಗಳ 850 ಕುಟುಂಬಗಳಿಗೆ ಈಗಾಗಲೇ ಶೆಲ್ಟರ್ ಕಿಟ್ ವಿತರಿಸಲಾಗಿದೆ. ಈಗ ಉತ್ತರ ಕನ್ನಡ ಜಿಲ್ಲೆಯಾದ್ಯಂತ ಸುಮಾರು 1250 ಸಂಪೂರ್ಣ ಮತ್ತು ಭಾಗಶಃ ಮನೆ ಕಳೆದುಕೊಂಡ ಕುಟುಂಬಗಳಿಗೆ ಶೆಲ್ಟರ್ ಕಿಟ್ ವಿತರಿಸಲಾಗುತ್ತಿದೆ. ಪ್ರಸ್ತುತ ಶಿರಸಿ ತಾಲೂಕಿನಲ್ಲಿ ಅತಿಯಾದ ಮಳೆಯಿಂದಾಗಿ ಮನೆಯನ್ನು ಸಂಪೂರ್ಣ ಅಥವಾ ಭಾಗಶಃ ಕಳೆದುಕೊಂಡ ಕುಟುಂಬಗಳಿಗೆ ಶೆಲ್ಟರ್ ಕಿಟ್ ವಿತರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ತಮಗೆ ಆಶ್ರಯ ನೀಡುವ ಮನೆಗಳನ್ನು ಕಳೆದುಕೊಂಡಾಗ ಆಗುವ ನೋವು ಅಷ್ಟಿಷ್ಟಲ್ಲ. ಅದಕ್ಕೆ ಪೂರಕವಾಗಿ ಮನುವಿಕಾಸ ಸಂಸ್ಥೆಯು ನೆರೆ ಸಂತ್ರಸ್ತರಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಿಸುತ್ತಿದೆ ಎಂದರು.

ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷರಾದ ಜಿ. ಸುಬ್ರಾಯ ಭಟ್ಟ ಬಕ್ಕಳ ಅವರು ಮಾತನಾಡಿ, ಕಳೆದ 22 ವರ್ಷಗಳಿಂದ ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಸಮಾಜದ ವಿವಿಧ ಸ್ಥರಗಳ ಸಮುದಾಯದ ಜನರಿಗೆ ಬೇಕಾದಂತಹ ಮೂಲಭೂತ ಸೌಕರ್ಯಗಳನ್ನು ಒದಗಿಸುತ್ತ ಬಂದಿದೆ. ಈ ಮೊದಲು ಕೋವಿಡ್-19ರ ಸಂದರ್ಭದಲ್ಲಿ ಸಂಸ್ಥೆಯಿಂದ ರೇಷನ್ ಕಿಟ್‌ಗಳನ್ನು ಒದಗಿಸಲಾಗಿತ್ತು. ಇಂದು ನೆರೆ ಸಂತ್ರಸ್ತರಿಗೆ ಅಗತ್ಯವಿರುವ ಶೆಲ್ಟರ್ ಕಿಟ್‌ಗಳನ್ನು ಒದಗಿಸುತ್ತಿರುವುದು ಸಂಸ್ಥೆ ಹೊಂದಿರುವ ಸಾಮಾಜಿಕ ಕಳಕಳಿಯನ್ನು ಎತ್ತಿ ತೋರಿಸುತ್ತದೆ ಎಂದರು.

ಶಿರಸಿಯ ನಗರ ಸಭೆ ಅಧ್ಯಕ್ಷರಾದ ಶ್ರೀಮತಿ ಶರ್ಮಿಳಾ ಮಾದನಗೇರಿ ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ಪ್ರಕೃತಿ ವಿಕೋಪಗಳಿಂದ ಸಂಭವಿಸಿರುವ ನೆರಹಾವಳಿಯಿಂದಾಗಿ ಇಂದು ಅದೆಷ್ಟೋ ಕುಟುಂಬಗಳು ತಮ್ಮ ನೆಲೆಯನ್ನು ಕಳೆದುಕೊಂಡಿವೆ. ಇಂತಹ ಸಂದರ್ಭದಲ್ಲಿ ಮನುವಿಕಾಸ ಸಂಸ್ಥೆಯು ಸಂತ್ರಸ್ತರಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಿಸಿ ಮಾನವೀಯತೆ ಮೆರೆಯುತ್ತಿದೆ, ಇದಕ್ಕೆ ನಮ್ಮ ಸಹಕಾರ ಸದಾ ಇರಲಿದೆ ಎಂದರು.

ಶಿರಸಿ ನಗರಸಭೆಯ ಉಪಾಧ್ಯಕ್ಷರಾದ ಶ್ರೀ ರಮಾಕಾಂತ್ ಭಟ್ಟ ಮಾತನಾಡಿ ಮನುವಿಕಾಸ ಸಂಸ್ಥೆ ಈ ಮೊದಲಿನಿಂದಲೂ ಜನಪರ ಕಾಳಜಿಯನ್ನು ಮುಖ್ಯ ಗುರಿಯನ್ನಾಗಿಟ್ಟುಕೊಂಡು ಕೆಲಸ ಮಾಡುತ್ತಿದೆ. ಸರಕಾರದ ಜೊತೆಯಲ್ಲಿ ಸಾಮಾಜಿಕ ಜವಾಬ್ದಾರಿಯನ್ನು ಹೊತ್ತಿರುವ ಸಂಸ್ಥೆಗಳು ಕೆಲಸ ಮಾಡಿದಾಗ ಮಾತ್ರ ಸಮಾಜದ ಸರ್ವತೋಮುಖ ಅಭಿವೃದ್ಧಿ ಸಾಧ್ಯ ಎಂದರು.

ಇದೇ ಸಂದರ್ಭದಲ್ಲಿ ಶಿರಸಿ ತಾಲೂಕಿನಲ್ಲಿ ಅತೀವ ಮಳೆಯಿಂದಾಗಿ ಹಾನಿ ಉಂಟಾದ 67 ಕುಟುಂಬಗಳಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಮನುವಿಕಾಸ ಸಂಸ್ಥೆಯ ಯೋಜನಾ ಉಪ ನಿರ್ದೇಶಕರಾದ ಶ್ರೀ ಅಶ್ವತ್ಥ ನಾಯ್ಕ ಕಾರ್ಯಕ್ರಮ ನಿರೂಪಿಸಿದರು. ಸಂಸ್ಥೆಯ ಸಿಬ್ಬಂದಿಗಳು ಕಾರ್ಯಕ್ರಮದಲ್ಲಿ ಹಾಜರಿದ್ದರು.



# ಯಲ್ಲಾಪುರ

ಮನುವಿಕಾಸ ಸಂಸ್ಥೆ ಹಾಗೂ ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ವತಿಯಿಂದ ಯಲ್ಲಾಪುರ ತಾಲೂಕಿನಲ್ಲಿ ದಿನಾಂಕ 29 ಆಗಸ್ಟ್ 2024 ರಂದು ಅತಿವೃಷ್ಟಿಯಿಂದ ಮನೆ ಹಾನಿಗೊಳಗಾದ ಬಡ ಕುಟುಂಬಗಳಿಗೆ ಶೆಲ್ಟರ್ ಕಿಟ್‌ಗಳನ್ನು ನೀಡುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಯಲ್ಲಾಪುರ ತಾಲೂಕಿನಲ್ಲಿ ಮಳೆಯಿಂದ ಮನೆ ಹಾನಿಗೊಳಗಾದ 50 ಜನ ಸಂತ್ರಸ್ತರಿಗೆ ಶೆಲ್ಟರ್ ಕಿಟ್‌ಗಳನ್ನು ವಿತರಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಯಲ್ಲಾಪುರ ಪಟ್ಟಣ ಪಂಚಾಯತಿಯ ಅಧ್ಯಕ್ಷರಾದ ಶ್ರೀಮತಿ ನರ್ಮದಾ ನಾಯ್ಕ, ಸಾಮಾಜಿಕ ಕಾರ್ಯಕರ್ತರಾದ ಶ್ರೀ ರವಿ ಕೈತಕರ್, ಸರ್ಕಾರದ ವಿವಿಧ ಇಲಾಖೆಯ ಅಧಿಕಾರಿಗಳು, ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳಾದ ಗಣಪತಿ ಗಾಮದ್, ನಾಗರಾಜ್ ಹಸ್ಲರ್, ರಾಮಚಂದ್ರ ಸಿದ್ಧಿ, ಕಿರಣ್ ಗೌಡ, ಸೂರ್ಯ ಗುಂಡು ಹಾಜರಿದ್ದರು.








## ಕೆರೆಗಳಿಗೆ ಬಾಗಿನ ಸಮರ್ಪಣೆ

**ಮ**ನುವಿಕಾಸ ಸಂಸ್ಥೆಯಿಂದ 2023-24ನೇ ಸಾಲಿನಲ್ಲಿ ಗ್ರಾಮ ಪಂಚಾಯತಿಯ ಅನುಮತಿ ಪಡೆದು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾದ ಕಲಘಟಗಿ ತಾಲೂಕಿನ ಬೀರವಳ್ಳಿ ಗ್ರಾಮದ ಹಾರನ ಕೆರೆ ಹಾಗೂ ಮುಂಡಗೋಡ ತಾಲೂಕಿನ ನಂದಿಕಟ್ಟಾ ಗ್ರಾಮದ ದೊಡ್ಡ ಕೆರೆಗಳಿಗೆ ರೈತರು ಬಾಗಿನ ಅರ್ಪಿಸುವ ಕಾರ್ಯಕ್ರಮವನ್ನು ದಿನಾಂಕ 06/08/2024 ಮಂಗಳವಾರದಂದು ಆಯೋಜಿಸಿ ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರನ್ನು ಆಹ್ವಾನಿಸಿದ್ದರು.

ರೈತರೊಂದಿಗೆ ಸೇರಿ ಗಣಪತಿ ಭಟ್ಟರು ಕೆರೆಗಳಿಗೆ ಬಾಗಿನ ಅರ್ಪಿಸಿ ಶುಭ ಹಾರೈಸಿದರು. ಈ ಸುಸಂಧರ್ಭದಲ್ಲಿ ಊರಿನ ಗ್ರಾಮಸ್ಥರು ಸಂಸ್ಥೆಯ ನಿರ್ದೇಶಕರಿಗೆ ಹಾಗೂ ಸಿಬ್ಬಂದಿಗಳಿಗೆ ಸನ್ಮಾನಿಸಿ ಗೌರವಿಸಿದರು. ಈ ಕಾರ್ಯಕ್ರಮದಲ್ಲಿ ಗ್ರಾಮದ ರೈತರು, ಮಹಿಳೆಯರು ಹಾಗೂ ಸ್ಥಳೀಯ ಗ್ರಾಮ ಪಂಚಾಯತಿಯ ಅಭಿವೃದ್ಧಿ ಅಧಿಕಾರಿಗಳು, ಅಧ್ಯಕ್ಷರು, ಉಪಾಧ್ಯಕ್ಷರು, ಸದಸ್ಯರು ಉಪಸ್ಥಿತರಿದ್ದರು.



## ಹೊಸ ಜೀವಕಳೆ ಪಡೆದುಕೊಂಡ ಬೆಳ್ಳೆಕೇರಿ ಕೆರೆ

ಶಿರಸಿ ತಾಲೂಕಿನ ಯಡಳ್ಳಿ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿನ ಬೆಳ್ಳೆಕೇರಿ ಗ್ರಾಮದ ಕೆರೆಯು ಅವಸಾನದ ಅಂಚಿನಲ್ಲಿತ್ತು. ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟರವರು ಬೆಳ್ಳೆಕೇರಿ ಗ್ರಾಮಸ್ಥರ ನೀರಿನ ಅಭಾವವನ್ನು ಮನಗಂಡು ಪ್ರಸ್ತುತ ವರ್ಷದ ಬೇಸಿಗೆ ಕಾಲದಲ್ಲಿ ಕೆರೆಯನ್ನು ತಮ್ಮ ಸ್ವಂತ ಖರ್ಚಿನಲ್ಲಿ ಊರಿನ ಗ್ರಾಮಸ್ಥರ ಸಹಕಾರದೊಂದಿಗೆ ಹೂಳೆತ್ತಿ ಅಭಿವೃದ್ಧಿಪಡಿಸಿದ್ದಾರೆ.








## ಸ್ವ ಸಹಾಯ ಸಂಘದ ಮಹಿಳೆಯರಿಗೆ ಕೋಳಿಮರಿಗಳ ವಿತರಣೆ

ಮನುವಿಕಾಸ ಸಂಸ್ಥೆ ಮತ್ತು ಈಡೇಲ್ ಗೀವ್ ಫೌಂಡೇಶನ್ ಸಹಕಾರದೊಂದಿಗೆ ಧಾರವಾಡ ಜಿಲ್ಲೆಯ ಕಲಘಟಗಿ, ಉತ್ತರ ಕನ್ನಡ ಜಿಲ್ಲೆಯ ಮುಂಡಗೋಡ, ಶಿರಸಿ, ಸಿದ್ದಾಪುರ ತಾಲೂಕಿನ ಆಯ್ದ ಸ್ವ ಸಹಾಯ ಸಂಘದ ಮಹಿಳೆಯರಿಗೆ 26/08/2024 ಸೋಮವಾರದಂದು ರಿಯಾಯತಿ ದರದಲ್ಲಿ ಕೋಳಿ ಮರಿಗಳನ್ನು ವಿತರಿಸಲಾಯಿತು.






# ನೈರ್ಮಲ್ಯ ಹಾಗೂ ಆರೋಗ್ಯ ಶಿಬಿರ



ಮನುವಿಕಾಸ ಸ್ವಯಂ ಸೇವಾ ಸಂಸ್ಥೆ, ನಬಾರ್ಡ್ ಬೆಂಗಳೂರು ಹಾಗೂ ಸಿದ್ಧಿಸಿರಿ ಗ್ರಾಮೀಣ ಜೀವನೋಪಾಯ ಅಭಿವೃದ್ಧಿ ಸಮಿತಿ ಇವರ ಸಂಯುಕ್ತ ಆಶ್ರಯದಲ್ಲಿ ದಿನಾಂಕ 17-09-2024ರಂದು ಅಂಕೋಲಾ ತಾಲೂಕಿನ ಡೋಂಗ್ರಿ ಪಂಚಾಯತ್ ವ್ಯಾಪ್ತಿಯ ಕನಕನಹಳ್ಳಿ ಗ್ರಾಮದಲ್ಲಿ ನೈರ್ಮಲ್ಯ ಹಾಗೂ ಆರೋಗ್ಯ ಶಿಬಿರವನ್ನು ಆಯೋಜಿಸಲಾಗಿತ್ತು.

ವಿಧಾನಪರಿಷತ್ ಸದಸ್ಯರಾದ ಶಾಂತರಾಮ್ ಸಿದ್ದಿ ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು. ಈಗಾಗಲೇ ಕೆರೆಗಳ ಪುನರುಜ್ಜೀವನ, ಕೃಷಿ ಹೊಂಡಗಳ ನಿರ್ಮಾಣ, ಮಹಿಳಾ ಸಬಲೀಕರಣ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಅವಿರತವಾಗಿ ಮನುವಿಕಾಸ ಸಂಸ್ಥೆ ಶ್ರಮಿಸುತ್ತಿದೆ. ಇಂದು ಮನುಷ್ಯನ ಅತ್ಯವಶ್ಯಕತೆಗಳಲ್ಲಿ ಒಂದಾದ ಆರೋಗ್ಯ ಹಾಗೂ ನೈರ್ಮಲ್ಯ ಶಿಬಿರವನ್ನು ಏರ್ಪಡಿಸಿದೆ. ಇದರ ಲಾಭವನ್ನು ಈ ಭಾಗದ ಜನರು ಪಡೆದುಕೊಳ್ಳಬೇಕು ಎಂದರು. ಕಾಲಕಾಲಕ್ಕೆ ನಿಯಮಿತವಾಗಿ ಆರೋಗ್ಯ ಪರೀಕ್ಷೆಗಳನ್ನು ಮಾಡಿಸಿಕೊಳ್ಳುವುದರಿಂದ ಮುಂದೆ ಬಂದೊದಗುವ ಕಾಯಿಲೆಗಳ ಬಗ್ಗೆ ಅರಿವು ಹಾಗೂ ಜಾಗೃತಿ ಉಂಟಾಗುತ್ತದೆ ಎಂದು ಅಭಿಪ್ರಾಯಪಟ್ಟರು. ಇದೇ ಸಂದರ್ಭದಲ್ಲಿ ಮನುವಿಕಾಸ ಸಂಸ್ಥೆಯ ನೂತನ ವಾರ್ತಾ ಪತ್ರವನ್ನು ಬಿಡುಗಡೆಗೊಳಿಸಲಾಯಿತು.

ಅಂಕೋಲಾದ ತಾಲೂಕ ವೈದ್ಯಾಧಿಕಾರಿಗಳಾದ ಡಾ. ಜಗದೀಶ್ ನಾಯಕ್ ಮಾತನಾಡಿ, ಇತ್ತೀಚೆಗೆ ಆಹಾರದ ಕಲಬೆರಕೆ, ಪೌಷ್ಟಿಕಾಂಶದ ಕೊರತೆ, ಕೆಲಸದ ವಿಪರೀತ ಒತ್ತಡ ಮೊದಲಾದ ಕಾರಣಗಳಿಂದಾಗಿ ಜನರು ಅತಿ ಚಿಕ್ಕ ವಯಸ್ಸಿನಲ್ಲಿಯೇ ಹಲವಾರು ಕಾಯಿಲೆಗಳಿಗೆ ತುತ್ತಾಗುತ್ತಿದ್ದಾರೆ. ನಿಯಮಿತ ವ್ಯಾಯಾಮ ಮತ್ತು ಉತ್ತಮ ಆರೋಗ್ಯ ಪದ್ಧತಿಯಿಂದ ರೋಗಗಳಿಂದ ನಾವು ದೂರವಿರಬಹುದು ಎಂದು ಸಲಹೆ ನೀಡಿದರು.

ನಬಾರ್ಡ್‌ನ ಜಿಲ್ಲಾ ಪ್ರಬಂಧಕರಾದ ಶ್ರೀ ಸುಶೀಲ್ ನಾಯ್ಕ್ ಮಾತನಾಡಿ, ಈಗಾಗಲೇ ನಬಾರ್ಡ್ ಮನುವಿಕಾಸದ ಜೊತೆಗೂಡಿ ಹಲವಾರು ರೈತ ಪರ ಕಾರ್ಯ ಯೋಜನೆಗಳನ್ನು ಜಾರಿಗೊಳಿಸಿದೆ. ಪ್ರಸ್ತುತ ಡೋಂಗ್ರಿ ಪಂಚಾಯತ್ ವ್ಯಾಪ್ತಿಯಲ್ಲಿನ 150 ಕುಟುಂಬಗಳಿಗೆ ಪರ್ಯಾಯ ಜೀವನೋಪಾಯ ಅಭಿವೃದ್ಧಿಗಾಗಿ ಚಟುವಟಿಕೆಗಳನ್ನು ರೂಪಿಸಿದೆ. ಯೋಜನೆಯು ಅರ್ಹ ಫಲಾನುಭವಿಯನ್ನು ತಲುಪಿದಾಗ ಮಾತ್ರ ಅದರ ಉದ್ದೇಶ ಈಡೇರಿದಂತೆ ಎಂದರು.

ಕನಕನಹಳ್ಳಿಯ ಭಾರತೀಯ ಕಿಸಾನ್ ಸಂಘದ ಅಧ್ಯಕ್ಷರಾದ ಶ್ರೀ ಶಿವರಾಮ ಗಾಂವ್ಕರ್ ಮಾತನಾಡಿ, ಇತ್ತೀಚಿನ ದಶಕಗಳಲ್ಲಿ ಯುವಜನತೆಗೆ ಬರುವ ರೋಗಗಳ ಪ್ರಮಾಣ ಅಧಿಕವಾಗಿದ್ದು, ಇದಕ್ಕೆ ಮುಖ್ಯ ಕಾರಣವೆಂದರೆ ಆರೋಗ್ಯದ ಬಗೆಗೆ ಅವರಿಗಿರುವ ನಿಷ್ಕಾಳಜಿ ಎಂದು ಬೇಸರ ವ್ಯಕ್ತಪಡಿಸಿದರು. ಸರಿಯಾದ ಸಮಯ ಪಾಲನೆ, ಕಾಲಕಾಲಕ್ಕೆ ವೈದ್ಯರ ಭೇಟಿ ಮತ್ತು ಪರೀಕ್ಷೆ ಮನುಷ್ಯನನ್ನು ದೀರ್ಘಾಯುಷಿಗಳನ್ನಾಗಿ ಮಾಡುತ್ತದೆ ಎಂದರು. ನಾವು ರೂಢಿಸಿಕೊಳ್ಳುವ ಉತ್ತಮ ಹವ್ಯಾಸಗಳು ನಮ್ಮ ಮುಂದಿನ ಬದುಕನ್ನು ನಿರ್ಧರಿಸುತ್ತವೆ ಎಂದರು. ಇದೇ ಸಂದರ್ಭದಲ್ಲಿ ಸುತ್ತಮುತ್ತಲ ಗ್ರಾಮ ಪಂಚಾಯತದ ಗ್ರಾಮಸ್ಥರು ಬಂದು ಆರೋಗ್ಯ ಪರೀಕ್ಷೆಯನ್ನು ಮಾಡಿಸಿಕೊಂಡು ಸೂಕ್ತ ಸಲಹೆ ಮತ್ತು ಮಾರ್ಗದರ್ಶನವನ್ನು ಪಡೆದರು.



ಕಾರ್ಯಕ್ರಮದಲ್ಲಿ ಸಿದ್ದಿಸಿರಿ ಗ್ರಾಮೀಣ ಜೀವನೋಪಾಯ ಅಭಿವೃದ್ಧಿ ಸಮಿತಿಯ ಅಧ್ಯಕ್ಷರು, ಕಾರ್ಯದರ್ಶಿಗಳು, ಸದಸ್ಯರು, ಸ್ಥಳೀಯ ಪ್ರಾಥಮಿಕ ಆರೋಗ್ಯ ಕೇಂದ್ರದ ಅಧಿಕಾರಿಗಳು, ಆಶಾ ಕಾರ್ಯಕರ್ತೆಯರು, ಗ್ರಾಮ ಪಂಚಾಯತ ಸದಸ್ಯರುಗಳು ಮತ್ತು ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯಿಂದ ಕೆರೆ ಸಮರ್ಪಣಾ ಕಾರ್ಯಕ್ರಮ





ಮನುವಿಕಾಸ ಸ್ವಯಂ ಸೇವಾ ಸಂಸ್ಥೆಯು ಆಶ್ರಯ ಹಸ್ತ ಟ್ರಸ್ಟ್, ಬೆಂಗಳೂರು ಇವರ ಸಹಯೋಗದೊಂದಿಗೆ 17/07/2024 ಬುಧವಾರದಂದು ಹಾವೇರಿ ಜಿಲ್ಲೆಯ ಬ್ಯಾಡಗಿ ತಾಲೂಕಿನ ಘಾಳಪೂಜಿ ಗ್ರಾಮದ ವಡ್ಡಿನಕಟ್ಟೆ ಕೆರೆ ಸಮರ್ಪಣಾ ಕಾರ್ಯಕ್ರಮವನ್ನು ಆಯೋಜಿಸಿತ್ತು.

ಹಳ್ಳಿಬೈಲ್ ಶ್ರೀ ಶಿವಲಿಂಗೇಶ್ವರ ಮಠದ ಮು. ನೀ. ಪ್ರ. ಸದಾಶಿವ ಮಹಾಸ್ವಾಮಿಗಳು ಕಾರ್ಯಕ್ರಮವನ್ನು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿ ಮಾತನಾಡಿ, ಮನುವಿಕಾಸ ಸಂಸ್ಥೆಯು ಮಾಡಿರುವ ಕಾರ್ಯವು ಸಮಾಜಕ್ಕೆ ಮಾದರಿಯಾಗಿದೆ. ರೈತನಿಗೆ ಬಹುಮುಖ್ಯವಾದ ನೀರಿನ ಬವಣೆಯನ್ನು ನೀಗಿಸಲು ಸಂಸ್ಥೆಯು ಅವಿರತ ಶ್ರಮ ವಹಿಸುತ್ತಿದೆ. ಇದರಿಂದಾಗಿ ಮನುಕುಲಕ್ಕೆ ಪ್ರಾಣವಾಯುವನ್ನು ದೊರಕಿಸಿಕೊಟ್ಟಂತಾಗಿದೆ ಎಂದು ಸಂಸ್ಥೆಯ ಕಾರ್ಯಕ್ಕೆ ಶ್ಲಾಘನೆ ವ್ಯಕ್ತ ಪಡಿಸಿದರು.

ಆಶ್ರಯ ಹಸ್ತ ಟ್ರಸ್ಟ್‌ನ ಪೋರ್ಟ್ ಪೋಲಿಯೋ ಮ್ಯಾನೇಜರ್ ಆದ ಶ್ರೀ ಮಾರುತಿ ಕೆ. ಮಾತನಾಡಿ, ಆಶ್ರಯ ಹಸ್ತ ಟ್ರಸ್ಟ್ ಒಂದು ದಾನಿ ಸಂಸ್ಥೆಯಾಗಿದೆ. ಇನ್ಫೋಸಿಸ್ ಸಹ ಸಂಸ್ಥಾಪಕರಲ್ಲಿ ಒಬ್ಬರಾದ ಶ್ರೀ ದಿನೇಶ್. ಕೆ ಇದರ ಮ್ಯಾನೇಜಿಂಗ್ ಟ್ರಸ್ಟಿ ಆಗಿದ್ದಾರೆ ಮತ್ತು ಇವರ ಮಡದಿ ಶ್ರೀಮತಿ ಆಶಾ ದಿನೇಶ್ ಅವರು ಸಹ ಇದನ್ನು ಮುನ್ನಡೆಸಿಕೊಂಡು ಹೋಗುತ್ತಿದ್ದಾರೆ. ಈವರೆಗೆ ಶಿಕ್ಷಣ, ಜೀವನೋಪಾಯ ನಿರ್ವಹಣೆ, ಪ್ರಾಣಿ ಸಂರಕ್ಷಣೆ ಮತ್ತು ಆರೋಗ್ಯ ಕ್ಷೇತ್ರಕ್ಕೆ ಮಾತ್ರ ಹಣಕಾಸಿನ ನೆರವನ್ನು ನೀಡುತ್ತಾ ಬಂದಿದ್ದು, ಈಗ ಪರಿಸರ ಕ್ಷೇತ್ರವನ್ನು ಕೂಡ ಪರಿಗಣಿಸಿ ಇಡೀ ದೇಶದಾದ್ಯಂತ ನೆರವಿನ ಹಸ್ತ ಚಾಚಿದೆ.

ಮನುವಿಕಾಸ ಸಂಸ್ಥೆಯು ಅಭಿವೃದ್ಧಿಪಡಿಸಿದ ಕೆರೆಗಳು ಇಂದು ಹಲವು ನೀರಿನ ಸಂರಕ್ಷಣೆ ಮಾಡುವಂತ ಸಂಸ್ಥೆಗಳಿಗೆ ಮಾದರಿಯಾಗಿದ್ದು, ರೈತನಿಗೆ ತನ್ನ ಆರ್ಥಿಕ ಮುನ್ನಡೆಯನ್ನು ಸಾಧಿಸಲು ಗಣನೀಯ ಕೊಡುಗೆಯನ್ನು ನೀಡಿದೆ ಎಂದು ಮನುವಿಕಾಸ ಸಂಸ್ಥೆಯ ಕಾರ್ಯವನ್ನು ಶ್ಲಾಘಿಸಿದರು.

ಮನುವಿಕಾಸ ಸಂಸ್ಥೆಯ ನಿರ್ದೇಶಕರಾದ ಗಣಪತಿ ಭಟ್ಟ ಇವರು ಪ್ರಾಸ್ತಾವಿಕವಾಗಿ ಮಾತನಾಡಿ, ನಮ್ಮ ಸಂಸ್ಥೆಯು 2003 ರಲ್ಲಿ ಪ್ರಾರಂಭವಾಗಿದ್ದು, ನೈಸರ್ಗಿಕ ಸಂಪನ್ಮೂಲಗಳ ಸದ್ಬಳಕೆ, ಪರಿಸರ ಸಂರಕ್ಷಣೆ, ಮಹಿಳಾ ಸಬಲೀಕರಣ, ಶಿಕ್ಷಣ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸುತ್ತಿದೆ.

ಈವರೆಗೆ 280 ಕ್ಕೂ ಹೆಚ್ಚು ಕೆರೆಗಳನ್ನು ರೈತರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಿದ್ದೇವೆ. ಹಾವೇರಿ ಜಿಲ್ಲೆಯ ಬ್ಯಾಡಗಿ 19, ಹಾನಗಲ್ 73, ಹಾವೇರಿ 1, ಹಿರೇಕೆರೂರು 3, ಶಿಗ್ಗಾಂವ 9, ಹೀಗೆ ಹಾವೇರಿ ಜಿಲ್ಲೆಯಲ್ಲಿ ಒಟ್ಟು 105 ಕೆರೆಗಳನ್ನು ಅಭಿವೃದ್ಧಿಪಡಿಸಿದ್ದೇವೆ.












ಮುಂಬರುವ ದಿನಗಳಲ್ಲಿ ರೈತರ ಅಗತ್ಯಕ್ಕೆ ಅನುಗುಣವಾಗಿ ಹೊಸ ಹಳ್ಳಿಗಳಲ್ಲಿ ಕೆರೆಗಳ ಅಭಿವೃದ್ಧಿ, ರೈತರಿಗೆ ಕೃಷಿ ಪೂರಕ ಚಟುವಟಿಕೆ, ಹೈನುಗಾರಿಕೆಯನ್ನು ಅಭಿವೃದ್ಧಿ ಪಡಿಸಿ ಅವರ ಆರ್ಥಿಕ ಸುಸ್ಥಿರತೆಯನ್ನು ಕಾಯ್ದು ಕೊಳ್ಳಲು ಸಂಸ್ಥೆ ಕಾರ್ಯ–ಯೋಜನೆಯನ್ನು ರೂಪಿಸುತ್ತಿದೆ ಎಂದರು.

ಇದೇ ಸಂದರ್ಭದಲ್ಲಿ ರೈತರ ಸಹಭಾಗಿತ್ವದೊಂದಿಗೆ ಅಭಿವೃದ್ಧಿಪಡಿಸಲಾದ ಗ್ರಾಮದ ವಡ್ಡಿನ ಕಟ್ಟಿ ಕೆರೆಯನ್ನು ಗ್ರಾಮ ಪಂಚಾಯತಿಗೆ ಹಸ್ತಾಂತರ ಮಾಡಲಾಯಿತು. ಕೆರೆಯನ್ನು ಸಮರ್ಪಕವಾಗಿ ಪುನರುಜ್ಜೀವನ –ಗೊಳಿಸಲು ಶ್ರಮಿಸಿದ ಮತ್ತು ಸಹಕಾರ ನೀಡಿದ ಮಹನೀಯರನ್ನು ಇದೇ ಸಂದರ್ಭದಲ್ಲಿ ಸ್ಮರಿಸಿ ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಫಾಳಪೂಜಿ ಗ್ರಾಮ ಪಂಚಾಯತ ಅಧ್ಯಕ್ಷರಾದ ಮಂಜಪ್ಪ ಅಂಗರ್ ಕಟ್ಟಿ, ಉಪಾಧ್ಯಕ್ಷರಾದ ಕವಿತಾ ತಳವಾರ್, ಕೆರೆ ಅಭಿವೃದ್ಧಿ ಸಮಿತಿಯ ಅಧ್ಯಕ್ಷರಾದ ಹನುಮಂತಪ್ಪ ಕೆಪ್ಪರ್, ಪಂಚಾಯತ ಅಭಿವೃದ್ಧಿ ಅಧಿಕಾರಿಗಳಾದ ಗೌಸಮುದ್ದೀನ್ ಸಾಬ್, ಗ್ರಾ.ಪಂ.ಸದಸ್ಯರಾದ ಚಂದ್ರಪ್ಪ ಗೂಳೇರ್, ಶ್ರೀ ಫಕ್ಕಿರೇಶ ಕಳ್ಳಿಮನಿ, ಕುಸುಮವ್ವ ಕೆಪ್ಪೆರ್, ಮಂಗಳ ಲಂಕೇರ, ಮಂಗಳವ್ವ ಜಾಡರ್, ವೀರ ಮಾರುತಿ ದೇವಾಲಯದ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಶ್ರೀ ಹನುಮಂತಪ್ಪ ಹಂಚಿನ ಗೌಡ್ರು, ಸಹಕಾರಿ ಸಂಘದ ಅಧ್ಯಕ್ಷರಾದ ಚಂದ್ರಶೇಖರ್ ಸವದತ್ತಿ, ರೈತ ಸಂಘದ ಅಧ್ಯಕ್ಷರಾದ ಷಣ್ಮುಖಪ್ಪ ಮಡ್ಲೂರು, ಸ್ವ–ಸಹಾಯ ಸಂಘದ ಸದಸ್ಯರುಗಳು, 250 ಕ್ಕೂ ಹೆಚ್ಚು ರೈತರು ಹಾಗೂ ಸ್ಥಳೀಯ ಗ್ರಾಮಸ್ಥರು ಸೇರಿದಂತೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಮನುವಿಕಾಸ ಸಂಸ್ಥೆಯಿಂದ ತಿಪ್ಪಣಗೇರಾ ಗ್ರಾಮದಲ್ಲಿ ಹೈನುಗಾರಿಕಾ ತರಬೇತಿ ಆಯೋಜನೆ











ಮನುವಿಕಾಸ ಸಂಸ್ಥೆ ಮತ್ತು ಈಡೇಲ್‌ಗೀವ್ ಫೌಂಡೇಶನ್ ಸಹಭಾಗಿತ್ವದಲ್ಲಿ ಹಳಿಯಾಳ ತಾಲೂಕಿನ ಗುಂಡೊಳ್ಳಿ ಗ್ರಾಮ ಪಂಚಾಯತದ ವ್ಯಾಪ್ತಿಯಲ್ಲಿನ ತಿಪ್ಪಣಗೇರಾ ಗ್ರಾಮದಲ್ಲಿ ದಿನಾಂಕ 12.09.2024 ಬುಧವಾರದಂದು ರೈತ ಮಹಿಳೆಯರಿಗಾಗಿ ಒಂದು ದಿನದ ಹೈನುಗಾರಿಕೆ ಅಭಿವೃದ್ಧಿ ತರಬೇತಿ ಆಯೋಜಿಸಲಾಗಿತ್ತು.

ಕಾರ್ಯಕ್ರಮಕ್ಕೆ ಮುಖ್ಯ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಹಳಿಯಾಳ ತಾಲೂಕಿನ ಪಶು ಸಂಗೋಪನೆ ಇಲಾಖೆಯ ಮುಖ್ಯ ವೈದ್ಯಾಧಿಕಾರಿಗಳಾದ ಡಾ. ನದಾಫ್ ಅವರು ಮಾತನಾಡಿ ಹೈನುಗಾರಿಕೆಯಲ್ಲಿ ಹಸು ಹಾಗೂ ಎಮ್ಮೆ ಖರೀದಿ, ಕರುಗಳ ಆರೈಕೆ ಬಹಳ ಮುಖ್ಯ ಹಂತವಾಗಿದೆ.

ರಾಸುಗಳಿಗೆ ಹಸಿಮೇವು ಹಾಗೂ ಒಣಮೇವಿನ ಜೊತೆಯಲ್ಲಿ ದ್ವಿದಳ ಧಾನ್ಯಗಳ ಆಹಾರವನ್ನು ಬಳಕೆ ಮಾಡಬೇಕು. ಉತ್ತಮ ಆಹಾರವನ್ನು ಪ್ರತಿನಿತ್ಯ ನೀಡುವುದರಿಂದ ಜಾನುವಾರು ಮತ್ತು ಕರುಗಳ ಬೆಳವಣಿಗೆಗೆ ಅತ್ಯಂತ ಸಹಾಯಕಾರಿಯಾಗಿದೆ ಎಂದು ಆಹಾರ ಪದ್ಧತಿ ಬಗ್ಗೆ ವಿವರಿಸಿದರು.

ಆಕಳುಗಳಿಗೆ ಕಂಡುಬರುವ ಕೆಚ್ಚಲ ಬಾವು ರೋಗ ಹಾಗೂ ಕಾಲುಬಾಯಿ ರೋಗದ ಲಕ್ಷಣ ಕಂಡು ಬಂದ ತಕ್ಷಣ ವೈದ್ಯರನ್ನು ಸಂಪರ್ಕಿಸಿ ಸೂಕ್ತ ಚಿಕಿತ್ಸೆಯನ್ನು ಕೊಡಿಸಬೇಕು, ನಿರ್ಲಕ್ಷವಹಿಸಿದರೆ ಅಪಾಯ ಎಂದು ಕಿವಿಮಾತು ಹೇಳಿದರು. ಹೈನುಗಾರಿಕೆಯಲ್ಲಿ ತಳಿಗಳ ಆಯ್ಕೆ, ಮೇವಿನ ಬೆಳೆ, ಜಾನುವಾರುಗಳಿಗೆ ಕಾಡುವ ರೋಗ ಬಾಧೆಗಳ ಕುರಿತು ಸಮಗ್ರವಾಗಿ ಮಾಹಿತಿಯನ್ನು ನೀಡಿದರು.

ಮನುವಿಕಾಸ ಸಂಸ್ಥೆಯ ತಾಲೂಕಾ ಸಂಯೋಜಕರಾದ ನಿರಂಜನ್ ಕದಂ ಸಂಸ್ಥೆಯ ಬಗ್ಗೆ ಪ್ರಾಸ್ತಾವಿಕವಾಗಿ ಮಾತನಾಡಿದರು. ಗುಂಡೊಳ್ಳಿ ಗ್ರಾಮ ಪಂಚಾಯಿತಿ ಸದಸ್ಯರಾದ ಶ್ರೀಮತಿ ಪುಷ್ಪಾ ಪಾಟೀಲ್ ಹಾಗೂ ಶ್ರೀ ವಿಠ್ಠಲ್ ಗೌಡ ಮತ್ತು ಗುಂಡೊಳ್ಳಿಯ ಕೆಎಂಎಫ್ ಡೈರಿಯ ಅಧ್ಯಕ್ಷರಾದ ಶ್ರೀಮತಿ ಅನುರಾಧ ಸಂಕನಕೊಪ್ಪನವರ್ ಹಾಗೂ ತಿಪ್ಪಣಗೇರಾ ಗ್ರಾಮದ ರೈತರು ಹಾಗೂ ಮಹಿಳೆಯರು ತರಬೇತಿಯಲ್ಲಿ ಭಾಗವಹಿಸಿದ್ದರು.



# ಕೃಷಿ ನಿರಂತರದಿಂದ ಬಾಳೆಗದ್ದೆಯಲ್ಲಿ ನೇತ್ರಾವತಿ ಡೈರಿ ಆರಂಭ

ಪ್ರಗತಿ ಮಿತ್ರ ರೈತ ಉತ್ಪಾದಕ ಕಂಪನಿ ಬಾಳೆಗದ್ದೆ, ಮನುವಿಕಾಸ ಸಂಸ್ಥೆ ಮತ್ತು ನಬಾರ್ಡ್ ಬೆಂಗಳೂರು ಇವರ ಸಹಕಾರದೊಂದಿಗೆ ಹೈನುಗಾರಿಕಾ ಕ್ಷೇತ್ರಕ್ಕೆ ಉತ್ತೇಜನ ನೀಡುವ ಉದ್ದೇಶದಿಂದ ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯನ್ನು ಆರಂಭಿಸಿದೆ.

ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯು ಬಾಳೆಗದ್ದೆಯಲ್ಲಿ ಜಾನುವಾರುಗಳ ಸಾಕಾಣಿಕೆಗೆ ಸುಸಜ್ಜಿತವಾದ ಕೊಟ್ಟಿಗೆಯನ್ನು ನಿರ್ಮಿಸಿದ್ದು, ದಿನಾಂಕ 14/8/2024 ಗುರುವಾರದಂದು ಎಂ.ಜಿ.ಹೆಗಡೆ ಹುಲಿಮನೆಯವರು ಕೊಟ್ಟಿಗೆಗೆ ಪೂಜೆ ಸಲ್ಲಿಸುವ ಮೂಲಕ ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯ ನೇತ್ರಾವತಿ ಡೈರಿ ಫಾರಂಗೆ ಚಾಲನೆಯನ್ನು ನೀಡಿ, ಹಸುವನ್ನು ದಾನವಾಗಿ ನೀಡಿದರು. ಬಾಳೆಗದ್ದೆಯ ಅನಂತ ಶಿವರಾಮ ಹೆಗಡೆಯವರು ಕೊಟ್ಟಿಗೆ ನಿರ್ಮಿಸಲು ತಮ್ಮ ಸ್ವಂತ ಜಾಗವನ್ನು ದಾನವಾಗಿ ನೀಡಿದ್ದಾರೆ.

ಈ ಕಾರ್ಯಕ್ರಮದಲ್ಲಿ ಜಿಲ್ಲೆಯ ನಬಾರ್ಡ್ ಸಂಸ್ಥೆಯ ಡಿ.ಡಿ.ಎಂ. ಸುಶೀಲ್ ನಾಯಕ್, ವ್ಯವಸ್ಥಾಪಕ ನಿರ್ದೇಶಕರಾದ ವಿವೇಕ್ ಹೆಗಡೆ, ಮನುವಿಕಾಸ ಸಂಸ್ಥೆಯ ಸಂಸ್ಥಾಪಕರಾದ ಹರಿಶ್ಚಂದ್ರ ಭಟ್ಟ ಹಾಗೂ ನಿರ್ದೇಶಕರಾದ ಗಣಪತಿ ಭಟ್ಟ, ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯ ಮುಖ್ಯ ಕಾರ್ಯನಿರ್ವಾಹಕರಾದ ಪ್ರಜ್ವಲ್ ಹೆಗಡೆ ಹಲಗೆ, ಪಶು ವೈದ್ಯರಾದ ಆರ್. ಎಸ್. ಹೆಗಡೆ ಬಾಳೆಗದ್ದೆ ಹಾಗೂ ನಿರ್ದೇಶಕ ಮಂಡಳಿಯ ಸದಸ್ಯರು, ರೈತ ಬಂಧುಗಳು ಉಪಸ್ಥಿತರಿದ್ದರು.

ದನ ಕರುಗಳನ್ನು ಮಾರಾಟ ಮಾಡಲು ಇಚ್ಛೆಯಿರುವ ರೈತರು ಹಾಗೂ ಜಾನುವಾರುಗಳನ್ನು ಸಾಕುವಂತಹ ಆಸಕ್ತಿ ಇರುವಂತಹ ಆಸಕ್ತರು ಕೃಷಿ ನಿರಂತರ ರೈತ ಉತ್ಪಾದಕ ಕಂಪನಿಯನ್ನು ಸಂಪರ್ಕಿಸಬಹುದಾಗಿದೆ.







# ಕುಂದಗೋಳದ ಯಲಿವಾಳ ಗ್ರಾಮದಲ್ಲಿ ಮಹಿಳೆಯರಿಗೆ ಸುಸ್ಥಿರ ಕೃಷಿ ತರಬೇತಿ ಆಯೋಜನೆ






ಮನುವಿಕಾಸ ಸಂಸ್ಥೆ ಹಾಗೂ ಈಡೇಲ್‌ಗೀವ್ ಫೌಂಡೇಶನ್ ಸಹಯೋಗದಲ್ಲಿ ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಯಲಿವಾಳ ಗ್ರಾಮದ ಪಂಚಾಯತ ಸಮುದಾಯ ಭವನದಲ್ಲಿ ದಿನಾಂಕ 14/09/2024 ಶನಿವಾರದಂದು ಮಹಿಳೆಯರಿಗೆ ಒಂದು ದಿನದ ಸುಸ್ಥಿರ ಕೃಷಿ ತರಬೇತಿಯನ್ನು ಆಯೋಜಿಸಲಾಗಿತ್ತು.

ಅತಿಥಿಗಳಾಗಿ ಆಗಮಿಸಿದ ನಿವೃತ್ತ ಪ್ರಾಚಾರ್ಯರಾದ ಆರ್.ಟಿ.ಹೀರೆಗೌಡ್ರು ಮಾತನಾಡಿ "ಎತ್ತಣ ಕೋಗಿಲೆ ಎತ್ತಣ ಮಾಮರ" ಎಂಬ ಮಾತಿನಂತೆ ಮನುವಿಕಾಸ ಸಂಸ್ಥೆಯು ಸಾಮಾಜಿಕ ಅಭಿವೃದ್ಧಿ ಯೋಜನೆಯನ್ನು ಹೊತ್ತು ಉತ್ತರ ಕನ್ನಡದಿಂದ ಯಲಿವಾಳ ಎಂಬ ನಮ್ಮ ಗ್ರಾಮಕ್ಕೆ ಆಗಮಿಸಿರುವುದು ನಮ್ಮೆಲ್ಲರ ಸೌಭಾಗ್ಯವಾಗಿದೆ. ಸರಕಾರ ನಮಗೆ ಏನು ಮಾಡಿದೆ ಅನ್ನುವುದುಕ್ಕಿಂತ ನಾವು ಸಮಾಜಕ್ಕೆ ಏನು ಕೊಡುಗೆ ಕೊಟ್ಟೆವು ಎನ್ನುವುದು ಮುಖ್ಯವಾಗಿದೆ. ಯೋಗ್ಯ ರೀತಿಯಲ್ಲಿ ತರಬೇತಿಯ ಸದುಪಯೋಗವನ್ನು ಪಡೆದುಕೊಳ್ಳಿ ಎಂದರು. ಸಾಮಾಜಿಕ ಕ್ಷೇತ್ರದ ಬಗ್ಗೆ ಮನುವಿಕಾಸ ಸಂಸ್ಥೆಯ ಕಾಳಜಿ ಶ್ಲಾಘನೀಯವಾಗಿದೆ ಎಂದರು.

ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿದ ಧಾರವಾಡ ಕೃಷಿ ವಿಜ್ಞಾನ ಕೇಂದ್ರದ ಹಿರಿಯ ವಿಜ್ಞಾನಿಗಳಾದ ಎಸ್.ಎ.ಬಿರಾದಾರ ಮಾತಾನಾಡಿ ಭಾರತ ದೇಶದಲ್ಲಿ ದಿನದಿಂದ ದಿನಕ್ಕೆ ಜನಸಂಖ್ಯೆ ಹೆಚ್ಚುತ್ತಿದೆ, ಆಹಾರೊತ್ಪನ್ನವು ಸಹ ಜನಸಂಖ್ಯೆಗೆ ಅನುಗುಣವಾಗಿ ಹೆಚ್ಚಳವಾಗಬೇಕಿದೆ. ಗೊಬ್ಬರವನ್ನು ಬೆಳೆಗಳಿಗೆ ಅನುಗುಣವಾಗಿ ಬಳಕೆ ಮಾಡಬೇಕು, ಅನಾವಶ್ಯಕವಾಗಿ ಕೀಟನಾಶಕಗಳನ್ನು ಬಳಕೆ ಮಾಡಬೇಡಿ, ಇದರಿಂದ ಒಳ್ಳೆಯ ಬ್ಯಾಕ್ಟೀರಿಯಾಗಳು ಸಹ ಸಾಯಬಹುದು ಎಂದರು. ಉತ್ಪನ್ನ ಕಡಿಮೆಯಾಗಲು ಮಣ್ಣಿನ ಫಲವತ್ತತೆಯ ಕೊರತೆ ಹಾಗೂ ಅತಿಯಾದ ಕೀಟ ನಾಶಕಗಳ ಬಳಕೆ ಪ್ರಮುಖ ಕಾರಣವಾಗಿದೆ. ಸಮಗ್ರ ಕೃಷಿ ಪದ್ಧತಿಯನ್ನು ಅನುಸರಿಸುವುದರಿಂದ ಲಾಭದ ಪ್ರಮಾಣ ಹೆಚ್ಚುವುದು. ಹೈನುಗಾರಿಕೆಯಲ್ಲಿ ಒಕ್ಕೂಟ ರಚನೆ ಅತ್ಯಗತ್ಯವಾಗಿದೆ ಎಂದರು. ಸಮಗ್ರ ಕೃಷಿಯಲ್ಲಿನ ವಿವಿಧತೆಯ ಕುರಿತು ಮಾಹಿತಿ ನೀಡಿದರು.

ಕಾರ್ಯಕ್ರಮದಲ್ಲಿ ಯಲಿವಾಳ ಗ್ರಾಮ ಪಂಚಾಯತಿಯ ಅಧ್ಯಕ್ಷರಾದ ನೀಲವ್ವ ಅಂಗಡಿ, ಉಪಾಧ್ಯಕ್ಷ ರಾಮಪ್ಪ ಶಿರಗುಪ್ಪಿ, ಸದಸ್ಯರಾದ ಶಿವರಾಜ ಹೀರೆಗೌಡ್ರು, ಪಕ್ಕೀರ ಚಿಕ್ಕನಗೌಡ್ರು, ನಿಂಗನಗೌಡ, ಸುರೇಶ ದಾನಪ್ಪನವರ, ರತ್ನವ್ವ ಜವಾಯಿ, ಜಬೇದಾಬಿ ನದಾಪ್ ಹಾಗೂ ಊರ ಹಿರಿಯರು, ಮನುವಿಕಾಸ ಸಂಸ್ಥೆಯ ವಲಯ ನಿರ್ವಾಹಕ ಬಸವರಾಜ್ ರಡ್ಡೇರ, ಪ್ರಭಾವತಿ ನಾಯ್ಕ ಉಪಸ್ಥಿತರಿದ್ದರು. ಗಣಪತಿ ಯಲಿವಾಳ ಕಾರ್ಯಕ್ರಮವನ್ನು ನಿರೂಪಿಸಿದರು.





# ಕೆರೆಯ ಸುಸ್ಥಿರತೆ ಕಾಪಾಡಲು ರೈತರೊಂದಿಗೆ ಸಭೆಗಳ ಆಯೋಜನೆ

ಮನುವಿಕಾಸ ಸಂಸ್ಥೆಯು ಕಳೆದ ಹಲವಾರು ವರ್ಷಗಳಿಂದ ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳ ಆಯ್ದ ತಾಲೂಕುಗಳಲ್ಲಿ ಗ್ರಾಮ ಪಂಚಾಯತಿಯ ಅನುಮತಿ ಪಡೆದು ಸ್ಥಳೀಯ ರೈತರ ಸಹಭಾಗಿತ್ವದಲ್ಲಿ 281 ಕೆರೆಗಳನ್ನು ಹೂಳೆತ್ತಿ ಅಭಿವೃದ್ಧಿಪಡಿಸಿದ್ದು, ಯೋಜನೆಯ ಅನುಕೂಲತೆಯನ್ನು ಸಾವಿರಾರು ರೈತರು ಪಡೆದುಕೊಂಡಿದ್ದಾರೆ. ಕೆರೆ ಪುನರುಜ್ಜೀವನ ಯೋಜನೆಯಿಂದ ಕೃಷಿಗೆ, ಜಾನುವಾರುಗಳಿಗೆ, ಕಾಡು ಪ್ರಾಣಿಗಳಿಗೆ ಕುಡಿಯಲು ನೀರು ದೊರಕಿದ್ದು ಜೀವ ವೈವಿಧ್ಯಗಳ ಪ್ರಗತಿಗೆ ಸಹಕಾರಿಯಾಗಿದೆ.

ಜವಾಬ್ದಾರಿಯುತವಾಗಿ ಕೆರೆಯನ್ನು ನೋಡಿಕೊಂಡು ಹೋಗುವ ಸಲುವಾಗಿ ಸಂಸ್ಥೆಯು ಅಭಿವೃದ್ಧಿಪಡಿಸಿದ ಕೆರೆಗಳಿಗೆ ಅಲ್ಲಿನ ರೈತರನ್ನು ಹಾಗೂ ಮಹಿಳೆಯರನ್ನು ಒಗ್ಗೂಡಿಸಿ ಕೆರೆ ಕಮಿಟಿಯನ್ನು ರಚಿಸಿದೆ. ಮನುವಿಕಾಸ ಸಂಸ್ಥೆಯು ಕೆರೆ ಅಭಿವೃದ್ಧಿಪಡಿಸಿದ ನಂತರ ಕೆರೆಯನ್ನು ಸುಸ್ಥಿರ ರೀತಿಯಲ್ಲಿ ಕಾಪಾಡಿಕೊಂಡು ಅಭಿವೃದ್ಧಿಪಡಿಸಿಕೊಂಡು ಹೋಗುವುದರ ಬಗೆಗೆ ಈಗಾಗಲೇ ಚಿಂತಿಸಿದೆ. ಹಾನಗಲ್, ಬ್ಯಾಡಗಿ, ಹೀರೆಕೆರೂರು, ಸೊರಬ, ಕಲಘಟಗಿ, ಮುಂಡಗೋಡ, ಶಿಗ್ಗಾಂವ ತಾಲೂಕುಗಳ ಆಯ್ದ ಕೆರೆ ಕಮಿಟಿಯ ಸದಸ್ಯರು ಹಾಗೂ ಊರಿನ ನಾಗರಿಕರೊಂದಿಗೆ ಮನುವಿಕಾಸ ಸಂಸ್ಥೆಯ ಸಿಬ್ಬಂದಿಗಳು ಸಭೆ ನಡೆಸಿ ಕೆರೆಯ ಮುಂದಿನ ಆಗು ಹೋಗುಗಳ ಬಗೆಗೆ ಚರ್ಚಿಸುತ್ತಿದ್ದಾರೆ.





**ಮನುವಿಕಾಸ ಸಂಸ್ಥೆಯು ಉತ್ತರ ಕನ್ನಡ, ಹಾವೇರಿ, ಶಿವಮೊಗ್ಗ ಮತ್ತು ಧಾರವಾಡ ಜಿಲ್ಲೆಗಳಲ್ಲಿ ಕೆಲಸ ನಿರ್ವಹಿಸುತ್ತಿದ್ದು, ಪ್ರತಿ ತಾಲೂಕಿಗೂ ಸಂಸ್ಥೆಯ ಕೆಲಸಗಳ ಉಸ್ತುವಾರಿಯನ್ನು ನೋಡಿಕೊಳ್ಳಲು ಈ ಕೆಳಗಿನಂತೆ ಸಿಬ್ಬಂದಿಗಳನ್ನು ನೇಮಿಸಿದೆ.**

| | | |
|---|---|---|
| ಶಿರಸಿ | ಮಂಜುನಾಥ ಹೆಗಡೆ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94494 53774 |
| | ಅಶ್ವತ್ಥ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99011 82957 |
| | ಗಣಪತಿ ಗಾಮದ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 91132 59935 |
| | ಭವಾನಿ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 82960 53961 |
| | ಬಾಲಚಂದ್ರ ಗೌಡ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 94804 16732 |
| ಸಿದ್ದಾಪುರ | ಪುನೀತ್ ನಾಯ್ಕ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| | ನಾಗರಾಜ್ ಹಸ್ಲರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 70227 63799 |
| ಸೊರಬ | ಪುನೀತ್ ನಾಯ್ಕ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 96862 24908 |
| ಹಳಿಯಾಳ & ದಾಂಡೇಲಿ | ನಿರಂಜನ್ ಕದಂ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72596 89630 |
| ಮುಂಡಗೋಡ | ಗಣಪತಿ ಯಲಿವಾಳ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 99802 05013 |
| ಹಾನಗಲ್ & ಬ್ಯಾಡಗಿ | ಜಗದೀಶ ಈರಣ್ಣನವರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 73380 06242 |
| ಹಿರೇಕೆರೂರ | ಬಸವರಾಜ ಎಸ್.ಜಿ. (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 84310 52674 |
| ಕಲಘಟಗಿ | ಬಸವರಾಜ್ ರಡ್ಡೇರ್ (ಕೆರೆ ಅಭಿವೃದ್ಧಿ ಮತ್ತು ಸ್ವ ಸಹಾಯ ಸಂಘಗಳ ನಿರ್ವಹಣೆ) | 9845884293 |
| ಕಾರವಾರ | ಸುಜಾತಾ ದುರ್ಗೇಕರ್ (ಸ್ವ ಸಹಾಯ ಸಂಘಗಳ ನಿರ್ವಹಣೆ) | 72045 77307 |
| ಕುಮಟಾ & ಹೊನ್ನಾವರ | ನವೀನ ನಾಯ್ಕ (ಸ್ವ ಸಹಾಯ ಸಂಘಗಳ ನಿರ್ವಹಣೆ) | 78991 54285 |

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿರಿ.

MANUVIKASA

# ಮನುವಿಕಾಸ

‘ಶ್ರೀ ಮಾತಾ’ ಬಿಲ್ಡಿಂಗ್, ವಿಜಯನಗರ, ತಾ|| ಶಿರಸಿ
ಉತ್ತರ ಕನ್ನಡ ಜಿಲ್ಲೆ, ಕರ್ನಾಟಕ–581401

Phone: +91 98459 82552 Email: manuvikasa@gmail.com
Website : www.manuvikasa.org